KACB600011122024

# ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಶಿಡ್ಲಘಟ್ಟ

ಇಂದು ದಿನಾಂಕಃ 02 ನೇ ತಾರೀಖು ಏಪ್ರಿಲ್, 2026

-ಉಪಸ್ಥಿತರು-

ಶ್ರೀಮತಿ. ಸುಕನ್ಯ ಸಿ.ಎಸ್ , ಬಿ .ಎ. ಎಲ್.ಎಲ್.ಬಿ.,
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ,
ಶಿಡ್ಲಘಟ್ಟ.

**ಸಿ.ಸಿ. ಸಂಖ್ಯೆ: 411/2024**

ಫಿರ್ಯಾದಿದಾರರು : ಸರ್ಕಾರದ ಪರವಾಗಿ ಆರಕ್ಷಕ ಉಪನಿರೀಕ್ಷಕರು,
ಶಿಡ್ಲಘಟ್ಟ ಗ್ರಾಮಾಂತರ ಪೋಲೀಸ್ ಠಾಣೆ.

(ಪ್ರತಿನಿಧಿಸುವವರು -ಸಹಾಯಾಕ ಸರ್ಕಾರಿ ಅಭಿಯೋಜಕರು)

ವಿರುದ್ಧ

ಆರೋಪಿತರು : 1. ನಾಗೇಶ ವಿ.ಬಿನ್ ಲೇಟ್ ವೆಂಕಟರವಣಪ್ಪ,
ಸುಮಾರು 42 ವರ್ಷ ವಯಸ್ಸು,

2. ಭಾಗ್ಯಮ್ಮ ಕೋಂ ನಾಗೇಶ ವಿ.
ಸುಮಾರು 38 ವರ್ಷ ವಯಸ್ಸು,

3. ಪವನಕುಮಾರ ಎನ್. ಬಿನ್ ನಾಗೇಶ ವಿ.
ಸುಮಾರು 19 ವರ್ಷ ವಯಸ್ಸು,

ಎಲ್ಲರ ವಾಸಃ ಎದ್ದುಲತಿಪ್ಪೇನಹಳ್ಳಿ ಗ್ರಾಮ,
ಶಿಡ್ಲಘಟ್ಟ ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ.

(ಆರೋಪಿತರ ಪರವಾಗಿ ಪ್ರತಿನಿಧಿಸಿದವರು ಶ್ರೀ.ಎಂ.ಬಿ.ಲೋಕೇಶ್, ವಕೀಲರು)

ಘಟನೆಯ ವಿವರಗಳು:-

| | | | |
|---|---|---|---|
| 1. | ಆಪಾದನೆ ದಿನಾಂಕ | - | 16.04.2024 |
| 2. | ಆಪಾದನೆ ವರದಿಯಾದ ದಿನಾಂಕ | - | 16.04.2024 |
| 3. | ಫಿರ್ಯಾದುದಾರರ ಹೆಸರು | - | ಸರಸ್ವತಿ |
| 4. | ಸಾಕ್ಷಿದಾರರ ವಿಚಾರಣೆ ಪ್ರಾರಂಭವಾದ ದಿನಾಂಕ | - | 26.3.2026 |
| 5. | ಸಾಕ್ಷಿದಾರರ ವಿಚಾರಣೆ ಮುಕ್ತಾಯವಾದ ದಿನಾಂಕ | - | 26.03.2026 |
| 6. | ಅಪಾದಿಸಲ್ಪಟ್ಟ ಅಪಾದನೆಗಳು | - | ಭಾರತೀಯ ದಂಡ ಸಂಹಿತೆ ಕಲಂ. 323, 324, 504, 506 ಸಹವಾಚಕ 34 ರಂತೆ. |
| 7. | ನ್ಯಾಯಾಧೀಶರ ಅಭಿಪ್ರಾಯ | - | ಆರೋಪಿತರು ನಿರ್ದೋಷಿಗಳು |

ತೀರ್ಪು

ಶಿಡ್ಲಘಟ್ಟ ಗ್ರಾಮಾಂತರ ಠಾಣಾ ಪೋಲೀಸರು ಆರೋಪಿತರ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ.323, 324, 504, 506 ಸಹವಾಚಕ 34 ರಡಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುವುದಾಗಿ ಆರೋಪಿಸಿ ನ್ಯಾಯಾಲಯಕ್ಕೆ ಈ ದೋಷಾರೋಪಣ ಪತ್ರವನ್ನು ಸಲ್ಲಿಸಿರುತ್ತಾರೆ.

2. ದೋಷಾರೋಪಣ ಪತ್ರದ ಸಂಕ್ಷಿಪ್ತ ಸಾರಾಂಶ ಈ ಕೆಳಗಿನಂತಿರುತ್ತದೆ.

ದಿನಾಂಕ: 16.04.2024 ರಂದು ಮಧ್ಯಾಹ್ನ ಸುಮಾರು 01.30 ಗಂಟೆ ಸಮಯದಲ್ಲಿ ಶಿಡ್ಲಘಟ್ಟ ಗ್ರಾಮಾಂತರ ಪೊಲೀಸ್ ಠಾಣಾ ಸರಹದ್ದು, ಎದ್ದುಲತಿಪ್ಪೇನಹಳ್ಳಿ ಗ್ರಾಮದಲ್ಲಿ ಚಾಸಾ.1 ರವರು ಅವರ ಮನೆಯ ಮುಂದೆ ಗ್ರಾಮ ಪಂಚಾಯ್ತಿವತಿಯಿಂದ ಅಳವಡಿಸಿದ್ದ ನಲ್ಲಿಯಲ್ಲಿ ನೀರನ್ನು

ಹಿಡಿದುಕೊಂಡು ಮರುದಿನ ಬರಲಿದ್ದ ಶ್ರೀರಾಮ ನವಮಿ ಹಬ್ಬದ ಪ್ರಯುಕ್ತ ಮನೆಯ ಗೋಡೆಯನ್ನು ಸ್ವಚ್ಛ ಮಾಡುತಿದ್ದಾಗ, 1 ರಿಂದ 3 ನೇ ಆರೋಪಿಗಳು ಚಾಸಾ.1 ಮೇಲೆ ಹಲ್ಲೆ ಮಾಡುವ ಸಮಾನ ಉದ್ದೇಶದಿಂದ ಚಾಸಾ.1 ರವರ ಮನೆಯ ಬಳಿ ಬಂದು ಚಾಸಾ.1 ರವರನ್ನು ಕುರಿತು "ನಮ್ಮ ಮನೆಗೆ ನೀರೇ ಬರುತ್ತಿಲ್ಲ ನೀನು ನಿಮ್ಮ ಮನೆಯ ಕಾಂಪೌಂಡ್ ಗೋಡೆಯನ್ನೆಲ್ಲಾ ಕ್ಲೀನ್ ಮಾಡುತ್ತಿದ್ದೀಯಾ ಬೇವರ್ಸಿ ಮುಂಡೆ" ಎಂದು ಅವಾಚ್ಯಶಬ್ದಗಳಿಂದ ಬೈದು 1 ನೇ ಆರೋಪಿ ದೊಣ್ಣೆಯಿಂದ ಚಾಸಾ.1 ರವರ ತಲೆಗೆ ಹೊಡೆದು ಸಾಮಾನ್ಯ ಸ್ವರೂಪದ ರಕ್ತಗಾಯವನ್ನುಂಟುಮಾಡಿ, ಅದೇ ದೊಣ್ಣೆಯಿಂದ ಅವರ ಬೆನ್ನಿನ ಹಿಂಭಾಗ ಹೊಡೆದು ಸಾಧಾರಣ ಸ್ವರೂಪದ ಗಾಯವನ್ನುಂಟುಮಾಡಿದ್ದು, 2 ನೇ ಆರೋಪಿ ಚಾಸಾ.1 ರವರ ತಲೆ ಕೂದಲನ್ನು ಹಿಡಿದು ಎಳೆದಾಡಿ, ಕಲ್ಲಿನಿಂದ ಅವರ ಮೈಮೇಲೆ ಹೊಡೆದು ನೋವನ್ನುಂಟುಮಾಡಿದ್ದು, 3 ನೇ ಆರೋಪಿ ಕೈಗಳಿಂದ ಚಾಸಾ.1 ರವರ ಮೈಮೇಲೆ ಹೊಡೆದು ನೋವುಂಟುಮಾಡಿ ಸಾಧಾರಣ ಸ್ವರೂಪದ ಗಾಯಗಳನ್ನುಂಟುಮಾಡಿ, ಚಾಸಾ.1 ರವರನ್ನು ಕುರಿತು "ನಿನ್ನನ್ನು ಈ ದಿನ ಪ್ರಾಣ ಸಹಿ ಸಹಿತ ಬಿಡುವುದಿಲ್ಲವೆಂದು" ಪ್ರಾಣಬೆದರಿಕೆ ಹಾಕಿರುತ್ತಾರೆ ಎಂಬುದು ಅಭಿಯೋಜನೆಯ ಪ್ರಕರಣವಾಗಿದೆ.

3. ಆರೋಪಿಗಳ ವಿರುದ್ಧ ಕ್ರಮ ಕೈಗೊಳ್ಳುವಂತೆ ಪ್ರಥಮ ಮಾಹಿತಿದಾರರಾದ ಚಾಸಾ.1 ಸರಸ್ವತಿ ರವರು ನೀಡಿದ ಪ್ರಥಮ ವರ್ತಮಾನ ಹೇಳಿಕೆಯ ಆಧಾರದ ಮೇಲೆ ಶಿಡ್ಲಘಟ್ಟ ಗ್ರಾಮಾಂತರ ಪೋಲೀಸ್ ಠಾಣಾ ಸಹಾಯಕ ಆರಕ್ಷಕ ಉಪ-ನಿರೀಕ್ಷಕರಾಗಿದ್ದ ಚಾಸಾ.7 ಶ್ರೀನಿವಾಸ ಕೆ. ರವರು ಪ್ರಕರಣ ನೋಂದಾಯಿಕೊಂಡು, ತನಿಖೆ ಪೂರ್ಣಗೊಳಿಸಿ, ನ್ಯಾಯಾಲಯಕ್ಕೆ

ಆರೋಪಿಗಳ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ. 323, 324, 504, 506 ಸಹವಾಚಕ 34 ರಡಿಯಲ್ಲಿ ದೋಷಾರೋಪಣೆ ಪಟ್ಟಿ ಸಲ್ಲಿಸಿದ್ದಾರೆ.

4. ಆರೋಪಿಗಳು ಜಾಮೀನಿನ ಮೇಲೆ ಬಿಡುಗಡೆ ಹೊಂದಿರುತ್ತಾರೆ. ನ್ಯಾಯಾಲಯವು ಭಾರತೀಯ ದಂಡ ಸಂಹಿತೆ ಕಲಂ. 323, 324, 504, 506 ಸಹವಾಚಕ 34 ರ ಆರೋಪಗಳಿಗೆ ಸಂಜ್ಞೆತೆಯನ್ನು ತೆಗೆದುಕೊಂಡಿದೆ. ನಂತರ ಆರೋಪಿಗಳಿಗೆ ದಂಡ ಪ್ರಕ್ರಿಯಾ ಸಂಹಿತೆ ಕಲಂ.207 ರಡಿ ದೋಷಾರೋಪಣಾ ಪಟ್ಟಿಯ ನಕಲನ್ನು ಆರೋಪಿಗಳಿಗೆ ಜಾರಿಗೊಳಿಸಿದೆ. ದೋಷಾರೋಪಣೆ ರಚಿಸುವ ಪೂರ್ವದಲ್ಲಿ ವಾದವನ್ನು ಆಲಿಸಲಾಯಿತು. ಆದರೆ ಆರೋಪಿಗಳ ವಿರುದ್ಧ ದೋಷಾರೋಪಣೆ ರಚಿಸುವ ಪೂರ್ವದಲ್ಲಿ ವಿಮೋಚನೆ ಮಾಡಲು ಯಾವುದೇ ಸಕಾರಣಗಳು ನ್ಯಾಯಾಲಯಕ್ಕೆ ಕಂಡು ಬರದ ಕಾರಣ ಆರೋಪಿಗಳ ವಿರುದ್ದ ಭಾರತೀಯ ದಂಡ ಸಂಹಿತೆ ಕಲಂ. 323, 324, 504, 506 ಸಹವಾಚಕ 34 ದೋಷಾರೋಪಣೆಯನ್ನು ರಚಿಸಿ, ಓದಿ, ಆರೋಪಿಗಳಿಗೆ ತಿಳಿಯುವ ಭಾಷೆಯಲ್ಲಿ ವಿವರಿಸಿ ಹೇಳಿದ್ದು, ಆರೋಪಿಗಳು ತಾವು ತಪ್ಪು ಮಾಡಿಲ್ಲ, ವಿಚಾರಣೆಯಾಗಬೇಕೆಂದು ಉತ್ತರಿಸಿರುತ್ತಾರೆ.

5. ಅಭಿಯೋಜನೆಯು ಆರೋಪಿಗಳ ವಿರುದ್ದ ಮಾಡಿರುವ ಆರೋಪಗಳನ್ನು ಸಂದೇಹಾತೀತವಾಗಿ ರುಜುವಾತು ಪಡಿಸಲು ಪ್ರಥಮ ಮಾಹಿತಿ ದಾಖಲಿಸಿದವರು ಮತ್ತು ನೊಂದ ಸಾಕ್ಷಿಯಾದ ಚಾಸಾ.1 ರವರನ್ನು ಫ್ರಾಸಾ-1 ಎಂದು ವಿಚಾರಣೆಗೆ ಗುರಿಪಡಿಸಿದೆ. ಪ್ರಕರಣದ ಪ್ರತ್ಯಕ್ಷ ಸಾಕ್ಷಿದಾರರು ಎನ್ನಲಾದ ಚಾಸಾ.3 ರವರನ್ನು ಫ್ರಾಸಾ.2 ಎಂದು ವಿಚಾರಣೆಗೆ ಗುರಿಪಡಿಸಿದೆ. ಅಭಿಯೋಜನೆಯು ಫ್ರಾಸಾ.1 ಮತ್ತು 2 ರವರ ಸಾಕ್ಷ್ಯದಲ್ಲಿ ಪ್ರಥಮ ವರ್ತಮಾನ

ಹೇಳಿಕೆ ದಾಖಲೆಯನ್ನು ನಿಪಿ-1 ಎಂದು ಹಾಗೂ ಫ್ರಾಸಾ.2 ರವರು ನೀಡಿರುತ್ತಾರೆಂದು ಹೇಳುವ ಹೇಳಿಕೆಯನ್ನು ನಿಪಿ.2 ಎಂದು ಗುರುತಿಸಿಕೊಂಡಿದೆ.

6. ಅಭಿಯೋಜನೆಯ ಪರ ಸಾಕ್ಷಿಗಳ ವಿಚಾರಣೆ ಮುಗಿದ ನಂತರ ದಂಡ ಪ್ರಕ್ರಿಯಾ ಸಂಹಿತೆ ಕಲಂ.313 ರ ಅಡಿಯಲ್ಲಿ ಆರೋಪಿಗಳ ಹೇಳಿಕೆಯನ್ನು ದಾಖಲು ಮಾಡಿದ್ದು, ಆರೋಪಿಗಳು ತಮ್ಮ ವಿರುದ್ಧ ನುಡಿದಿರುವ ಸಾಕ್ಷ್ಯವನ್ನು ಅಲ್ಲಗಳೆದಿದ್ದು, ತಮ್ಮ ಪರ ಸಾಕ್ಷ್ಯ ವಿಚಾರಣೆ ಇಲ್ಲವೆಂದು ನುಡಿದಿದ್ದರಿಂದ ಪ್ರಕರಣವನ್ನು ವಾದ ಮಂಡನೆಗೆ ಮುಂದೂಡಲಾಯಿತು.

7. ಅಭಿಯೋಜನಾ ಪರ ಮಾನ್ಯ ಸಹಾಯಕ ಸರ್ಕಾರಿ ವಕೀಲರ ಮತ್ತು ನುರಿತ ಆರೋಪಿಗಳ ಪರ ವಕೀಲರ ವಾದವನ್ನು ಆಲಿಸಲಾಯಿತು. ನ್ಯಾಯಾಲಯದ ಮುಂದೆ ಲಭ್ಯವಿರುವ ದಾಖಾಲಾತಿಗಳ ಆಧಾರದ ಮೇಲೆ ಈ ನ್ಯಾಯಾಲಯದ ತೀರ್ಮಾನಕ್ಕೆ ಕೆಳಕಂಡ ಅಂಶ ಉದ್ಭವಿಸಿದೆ.

<u>ಅಂಶಗಳು</u>

1. ದಿನಾಂಕಃ 16.04.2024 ರಂದು ಮಧ್ಯಾಹ್ನ ಸುಮಾರು 01.30 ಗಂಟೆ ಸಮಯದಲ್ಲಿ ಶಿಡ್ಲಘಟ್ಟ ಗ್ರಾಮಾಂತರ ಪೊಲೀಸ್ ಠಾಣಾ ಸರಹದ್ದು, ಎದ್ದುಲತಿಪ್ಪೇನಹಳ್ಳಿ ಗ್ರಾಮದಲ್ಲಿ ಚಾಸಾ.1 ರವರು ಅವರ ಮನೆಯ ಮುಂದೆ ಗ್ರಾಮ ಪಂಚಾಯ್ತಿವತಿಯಿಂದ ಅಳವಡಿಸಿದ್ದ ನಲ್ಲಿಯಲ್ಲಿ ನೀರನ್ನು ಹಿಡಿದುಕೊಂಡು ಮರುದಿನ ಬರಲಿದ್ದ ಶ್ರೀರಾಮ ನವಮಿ ಹಬ್ಬದ ಪ್ರಯುಕ್ತ ಮನೆಯ ಗೋಡೆಯನ್ನು ಸ್ವಚ್ಛ ಮಾಡುತಿದ್ದಾಗ, 1 ರಿಂದ 3 ನೇ ಆರೋಪಿಗಳು ಚಾಸಾ.1 ಮೇಲೆ ಹಲ್ಲೆ ಮಾಡುವ ಸಮಾನ ಉದ್ದೇಶದಿಂದ ಚಾಸಾ.1 ರವರ ಮನೆಯ ಬಳಿ ಬಂದು ಚಾಸಾ.1 ರವರನ್ನು ಕುರಿತು "ನಮ್ಮ ಮನೆಗೆ ನೀರೇ ಬರುತ್ತಿಲ್ಲ ನೀನು ನಿಮ್ಮ ಮನೆಯ ಕಾಂಪೌಂಡ್ ಗೋಡೆಯನ್ನೆಲ್ಲಾ ಕ್ಲೀನ್ ಮಾಡುತ್ತಿದ್ದೀಯಾ ಬೇವರ್ಸಿ ಮುಂಡೆ" ಎಂದು ಅವಾಚ್ಯಶಬ್ದಗಳಿಂದ ಬೈದು,

ಅವಮಾನಪಡಿಸುವ ಮೂಲಕ ಭಾರತೀಯ ದಂಡ ಸಂಹಿತೆ ಕಲಂ.504 ಸಹವಾಚಕ 34 ರ ಮೇರೆಗೆ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದಾರೆಂದು ಅಭಿಯೋಜನೆಯು ಸಂಶಯಾತೀತವಾಗಿ ರುಜುವಾತುಪಡಿಸಿದೆಯೇ?

2. ಎರಡನೆಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರು ಸಮಾನ ಉದ್ದೇಶವನ್ನು ಮುಂದುವರಿಸಿ, 1 ನೇ ಆರೋಪಿ ದೊಣ್ಣೆಯಿಂದ ಚಾಸಾ.1 ರವರ ತಲೆಗೆ ಹೊಡೆದು ಸಾಮಾನ್ಯ ಸ್ವರೂಪದ ರಕ್ತಗಾಯವನ್ನುಂಟುಮಾಡಿ, ಅದೇ ದೊಣ್ಣೆಯಿಂದ ಬೆನ್ನಿನ ಹಿಂಭಾಗ ಹೊಡೆದು ನೋವನ್ನುಂಟುಮಾಡಿದ್ದು, 2 ನೇ ಆರೋಪಿ ಕಲ್ಲಿನಿಂದ ಚಾಸಾ.1 ರವರ ಮೈಮೇಲೆ ಹೊಡೆದು ನೋವನ್ನುಂಟುಮಾಡಿ, ಸಾಧಾರಣ ಸ್ವರೂಪದ ಗಾಯಗಳನ್ನುಂಟುಮಾಡುವ ಮೂಲಕ ಭಾರತೀಯ ದಂಡ ಸಂಹಿತೆ ಕಲಂ.324 ಸಹವಾಚಕ 34 ರ ಮೇರೆಗೆ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದಾರೆಂದು ಅಭಿಯೋಜನೆಯು ಸಂಶಯಾತೀತವಾಗಿ ರುಜುವಾತುಪಡಿಸಿದೆಯೇ?

3. ಮೂರನೆಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರು ಸಮಾನ ಉದ್ದೇಶವನ್ನು ಮುಂದುವರಿಸಿ, 2 ನೇ ಆರೋಪಿ ಚಾಸಾ.1 ರವರ ತಲೆ ಕೂದಲನ್ನು ಹಿಡಿದು ಎಳೆದಾಡಿ, ನೋವನ್ನುಂಟುಮಾಡಿದ್ದು, 3 ನೇ ಆರೋಪಿ ಕೈಗಳಿಂದ ಚಾಸಾ.1 ರವರ ಮೈಮೇಲೆ ಹೊಡೆದು ನೋವುಂಟುಮಾಡಿ ಸಾಧಾರಣ ಸ್ವರೂಪದ ಗಾಯಗಳನ್ನುಂಟುಮಾಡುವ ಮೂಲಕ ಭಾರತೀಯ ದಂಡ ಸಂಹಿತೆ ಕಲಂ.323 ಸಹವಾಚಕ 34 ರ ಮೇರೆಗೆ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದಾರೆಂದು ಅಭಿಯೋಜನೆಯು ಸಂಶಯಾತೀತವಾಗಿ ರುಜುವಾತುಪಡಿಸಿದೆಯೇ?

4. ನಾಲ್ಕನೆಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರು ಸಮಾನ ಉದ್ದೇಶವನ್ನು ಮುಂದುವರಿಸಿ, ಚಾಸಾ.1 ರವರನ್ನು ಕುರಿತು "ನಿನ್ನನ್ನು ಈ ದಿನ ಪ್ರಾಣ ಸಹಿ ಸಹಿತ ಬಿಡುವುದಿಲ್ಲವೆಂದು" ಪ್ರಾಣಬೆದರಿಕೆ ಹಾಕಿ ಅಪರಾಧಿಕ ಭಯೋತ್ಪಾದನೆಯನ್ನುಂಟುಮಾಡುವ ಮೂಲಕ ಭಾರತೀಯ ದಂಡ ಸಂಹಿತೆ ಕಲಂ.506 ಸಹವಾಚಕ

34 ಮೇರೆಗೆ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದಾರೆಂದು ಅಭಿಯೋಜನೆಯು ಸಂಶಯಾತೀತವಾಗಿ ರುಜುವಾತುಪಡಿಸಿದೆಯೇ?

5. ಆದೇಶ ಏನು?

8. ನ್ಯಾಯಾಲಯದ ಮುಂದೆ ಲಭ್ಯವಿರುವ ಸಾಕ್ಷ್ಯದಾರಗಳಿಂದ ಮೇಲ್ಕಂಡ ಅಂಶಕ್ಕೆ ಕೆಳಕಂಡಂತೆ ಉತ್ತರಿಸಿರುತ್ತೇನೆ.

ಅಂಶ-1 ರಿಂದ 4: ನಕಾರಾತ್ಮಕವಾಗಿ

ಅಂಶ-5 : ಈ ಕೆಳಕಂಡ ಕಾರಣಗಳಿಂದ ಅಂತಿಮ ಆದೇಶದಂತೆ

ಕಾರಣಗಳು

9. ಅಂಶ-1 ರಿಂದ 4 -ಮೇಲ್ಕಂಡ ಅಂಶಗಳು ಒಂದಕ್ಕೊಂದು ಪೂರಕವಾಗಿರುವುದರಿಂದ, ಸಾಕ್ಷ್ಯದ ಪುನರಾವರ್ತನೆಯನ್ನು ತಪ್ಪಿಸಲು ಒಟ್ಟಿಗೆ ಚರ್ಚೆಗೆ ತೆಗೆದುಕೊಳ್ಳಲಾಗಿದೆ.

10. ಅಭಿಯೋಜನೆಯು ಆರೋಪಿಗಳ ವಿರುದ್ದ ಮಾಡಿರುವ ಆರೋಪಗಳನ್ನು ರುಜುವಾತುಪಡಿಸಲು ಪ್ರಥಮ ಮಾಹಿತಿದಾರರು, ನೊಂದ ಸಾಕ್ಷಿದಾರರಾದ ಚಾಸಾ.1 ರವರನ್ನು ಫ್ರಾಸಾ.1 ಎಂದು ವಿಚಾರಣೆಗೆ ಗುರುತುಪಡಿಸಿದ್ದು, ಫ್ರಾಸಾ.1 ರವರು ಅಭಿಯೋಜನಾ ಪ್ರಕರಣವನ್ನು ಬೆಂಬಲಿಸಿ ಸಾಕ್ಷ್ಯವನ್ನು ನುಡಿದಿರುವುದಿಲ್ಲ. ಫ್ರಾ.ಸಾ.1 ರವರು ತಮ್ಮ ಸಾಕ್ಷ್ಯದಲ್ಲಿ, ಆರೋಪಿಗಳು ತಮಗೆ ದೊಣ್ಣೆಯಿಂದ, ಕೈಗಳಿಂದ ಹೊಡೆದಿಲ್ಲ ಮತ್ತು ಪ್ರಾಣಬೆದರಿಕೆ ಹಾಕಿಲ್ಲ ಎಂದು ಸಾಕ್ಷ್ಯ ನುಡಿದು, ನಿಪಿ.1 ಪ್ರಥಮ ವರ್ತಮಾನ ಹೇಳಿಕೆಯಲ್ಲಿನ ತಮ್ಮ ಸಹಿಯನ್ನು ಗುರ್ತಿಸಿ, ತಾವು ಗಾಬರಿಯಲ್ಲಿ ನಿಪಿ.1 ರಲ್ಲಿ ಏನು ಹೇಳಿ ಬರೆಸಿರುತ್ತೇನೆಂದು ಗೊತ್ತಿಲ್ಲ, ನಿಪಿ.1 ಹೇಳಿಕೆಯಲ್ಲಿ ಬರೆದಿರುವ ಸಂಗತಿಗಳು

ಗೊತ್ತಿಲ್ಲವೆಂದು ಸ್ಪಷ್ಟವಾಗಿ ಸಾಕ್ಷ್ಯ ನುಡಿದು, ಆರೋಪಿಗೂ ತಮಗೂ ಯಾವುದೇ ಜಗಳ ಆಗಿರುವುದಿಲ್ಲವೆಂದು ನುಡಿದಿರುತ್ತಾರೆ. ಫ್ರಾಸಾ.1 ರವರು ಆರೋಪಿಗಳು ತಮಗೆ ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆಂದು ಸಾಕ್ಷ್ಯ ನುಡಿದಿರುತ್ತಾರೆ. ಆದರೆ, ಆರೋಪಿತರ ಪರ ವಕೀಲರು ಫ್ರಾಸಾ.1 ರವರನ್ನು ಪಾಟಿಸವಾಲು ಮಾಡಿದಾಗ ಆರೋಪಿತರು ಯಾವ ಪದಗಳನ್ನು ಉಪಯೋಗಿಸಿ, ಬೈದಿರುತ್ತಾರೆಂದು ಗೊತ್ತಿಲ್ಲವೆಂದು ಸ್ಪಷ್ಟವಾಗಿ ಒಪ್ಪಿರುತ್ತಾರೆ. ಉಳಿದಂತೆ ಫ್ರಾಸಾ.1 ರವರನ್ನು ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಿದರೂ ಸಹ ಅಭಿಯೋಜನೆಯ ಪ್ರಕರಣಕ್ಕೆ ಅನುಕೂಲವಾಗುವ ಯಾವುದೇ ಸಂಗತಿಗಳು ಹೊರಹೊಮ್ಮಿರುವುದಿಲ್ಲ.

11. ಅಭಿಯೋಜನೆಯವರು ಪ್ರಕರಣದ ಪ್ರತ್ಯಕ್ಷ ಸಾಕ್ಷಿದಾರರು ಎಂದು ಹೇಳಲಾದ ಫ್ರಾಸಾ.2 ರವರು ತಮ್ಮ ಸಾಕ್ಷ್ಯದಲ್ಲಿ ತಾವು ಯಾವುದೇ ಗಲಾಟೆಯನ್ನು ನೋಡಿಲ್ಲ, ತಮಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲ. ತಾವು ತನಿಖಾಧಿಕಾರಿಗಳ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ ಹಾಗೂ ತನಿಖಾಧಿಕಾರಿಗಳು ತಮ್ಮನ್ನು ವಿಚಾರಣೆ ಮಾಡಿರುವುದಿಲ್ಲವೆಂದು ಸ್ಪಷ್ಟವಾಗಿ ಸಾಕ್ಷ್ಯ ನುಡಿದಿರುತ್ತಾರೆ. ಉಳಿದಂತೆ ಫ್ರಾಸಾ.2 ರವರನ್ನು ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಿದರೂ ಸಹ ಅಭಿಯೋಜನೆಯ ಪ್ರಕರಣಕ್ಕೆ ಅನುಕೂಲವಾಗುವ ಯಾವುದೇ ಸಂಗತಿಗಳು ಹೊರಹೊಮ್ಮಿರುವುದಿಲ್ಲ.

12. ಆರೋಪಿತರ ವಿರುದ್ಧ ಅಭಿಯೋಜನೆಯು ಮಾಡಿರುವ ಆರೋಪಗಳನ್ನು ರುಜುವಾತುಪಡಿಸಲು, ಅಭಿಯೋಜನೆಯ ಪ್ರಕರಣದ ನೊಂದ,

ಫಿರ್ಯಾದುದಾರು ಮತ್ತು ಪ್ರತ್ಯಕ್ಷ ಸಾಕ್ಷಿದಾರರ ಸಾಕ್ಷ್ಯವು ಬಹುಮುಖ್ಯವಾಗಿದ್ದು, ಇವರನ್ನು ಅಭಿಯೋಜನೆಯು ಪ್ರಾಸಾ.1 ಮತ್ತು 2 ಎಂದು ವಿಚಾರಣೆಗೆ ಗುರಿಪಡಿಸಿದರೂ ಸಹ ಇವರು ಅಭಿಯೋಜನೆಯ ಪ್ರಕರಣಕ್ಕೆ ಸಂಪೂರ್ಣ ವ್ಯತಿರಿಕ್ತ ಸಾಕ್ಷ್ಯ ನುಡಿದಿದ್ದಾರೆ. ಆದುದರಿಂದ ಪ್ರಾಸಾ.1 ಮತ್ತು 2 ರವರು ಅಭಿಯೋಜನೆ ಪ್ರಕರಣಕ್ಕೆ ಸಂಪೂರ್ಣ ವ್ಯತಿರಿಕ್ತ ಸಾಕ್ಷ್ಯ ನುಡಿದಿರುವುದು ಅಭಿಯೋಜನೆಯ ಪ್ರಕರಣವನ್ನು ಗಮನಾರ್ಹವಾಗಿ ದುರ್ಬಲಗೊಳಿಸಿದೆ. ಪ್ರಾ.ಸಾ.1 ಮತ್ತು 2 ರವರು ಅಭಿಯೋಜನೆಯ ಪ್ರಕರಣಕ್ಕೆ ಮೇಲೆ ಹೇಳಿದಂತೆ ವ್ಯತಿರಿಕ್ತ ಸಾಕ್ಷ್ಯವನ್ನು ನುಡಿದು ಅಭಿಯೋಜನಾ ಪ್ರಕರಣವನ್ನು ಗಮನಾರ್ಹವಾಗಿ ದುರ್ಬಲಗೊಳಿಸಿರುವುದರಿಂದ ಈ ಪ್ರಕರಣದ ತನಿಖಾಧಿಕಾರಿ ಹಾಗೂ ಇತರೆ ಸಾಕ್ಷಿದಾರರನ್ನು ವಿಚಾರಣೆ ಮಾಡಿದರೂ ಸಹ ಅಭಿಯೋಜನೆಯ ಪ್ರಕರಣಕ್ಕೆ ಅನುಕೂಲವಾಗುವುದಿಲ್ಲ ಎಂದು ನ್ಯಾಯಾಲಯ ಅಭಿಪ್ರಾಯಪಟ್ಟು, ಇತರೆ ಸಾಕ್ಷಿದಾರರಿಗೆ ಸಮನ್ಸ್ ಹೊರಡಿಸಬೇಕೆಂಬ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರ ಕೋರಿಕೆಯನ್ನು ತಿರಸ್ಕರಿಸಿ, ಇತರೆ ಸಾಕ್ಷಿದಾರರ ವಿಚಾರಣೆಯನ್ನು ಕೈ ಬಿಡಲಾಗಿದೆ.

13. ಅಭಿಯೋಜನೆಯು ಪ್ರಥಮ ವರ್ತಮಾನ ಹೇಳಿಕೆಯನ್ನು ನಿ.ಪಿ.1 ಎಂದು ಗುರುತಿಸಿಕೊಂಡರು ಸಹ ಪ್ರಾ.ಸಾ.1 ರವರು ನಿ.ಪಿ.1 ರಲ್ಲಿ ಬರೆದಿರುವ ಸಂಗತಿಗಳು ಮತ್ತು ವಿಚಾರಗಳು ಗೊತ್ತಿಲ್ಲ ಎಂದು ಸ್ಪಷ್ಟವಾಗಿ ಸಾಕ್ಷ್ಯ ನುಡಿದಿದ್ದಾರೆ. ಪ್ರಾಸಾ.1 ರವರನ್ನು ಪಾಟಿಸವಾಲು ಮಾಡಿದರೂ ಸಹ ನಿಪಿ.1 ರಂತೆ ಆರೋಪಿಗಳ ವಿರುದ್ಧ ಕ್ರಮ ತೆಗೆದುಕೊಳ್ಳುವಂತೆ ದೂರು ನೀಡಿರುತ್ತಾರೆ ಎಂಬುದನ್ನು ರುಜುವಾತುಪಡಿಸಲು ಯಾವುದೇ ಸಂಗತಿ ಹೊರಹೊಮ್ಮಿರುವುಲ್ಲ. ಹಾಗೆಯೇ ಅಭಿಯೋಜನೆಯವರು ಪ್ರಾಸಾ.2 ರವರನ್ನು ಪಾಟಿಸವಾಲು ಮಾಡಿದರೂ ಸಹ

ನಿಪಿ.2 ರ ಹೇಳಿಕೆಯನ್ನು ಬೆಂಬಲಿಸುವ ಯಾವುದೇ ಸಾಕ್ಷ್ಯ ಹೊರಹೊಮ್ಮಿಲ್ಲ. ಆದ್ದರಿಂದ ಆರೋಪಿತರ ವಿರುದ್ಧ ಅಪರಾಧಿಕ ಹೊಣೆಗಾರಿಕೆ ಹೊರಿಸಲು ಅಭಿಯೋಜನೆಯ ಪ್ರಕರಣದಲ್ಲಿ ಸಾಕಷ್ಟು ಸಾಕ್ಷ್ಯ ಲಭ್ಯವಿರುವುದಿಲ್ಲ. ಫ್ರಾಸಾ.1 ಮತ್ತು 2 ರವರ ಸಾಕ್ಷ್ಯವು ಅಭಿಯೋಜನೆಯ ಪ್ರಕರಣವನ್ನು ಈಗಾಗಲೇ ಮೇಲೆ ಚರ್ಚಿಸಿದಂತೆ ಗಮನಾರ್ಹವಾಗಿ ಕುಂಠಿತಗೊಳಿಸಿರುವುದರಿಂದ ಮತ್ತು ಆರೋಪಿತರನ್ನು ಅಪರಾಧಿಕ ಹೊಣೆಗಾರಿಕೆಗೆ ಗುರಿಪಡಿಸಲು ಅಭಿಯೋಜನೆಯ ಪ್ರಕರಣದಲ್ಲಿ ಸಾಕಷ್ಟು ಸಾಕ್ಷ್ಯ ಲಭ್ಯವಿಲ್ಲದಿರುವುದರಿಂದ, ಅಭಿಯೋಜನೆಯು ಯಾವುದೇ ಸಂಶಯಕ್ಕೆ ಎಡೆ ಮಾಡಿಕೊಡದೆ ಆರೋಪಿತರ ವಿರುದ್ಧ ಮಾಡಿರುವ ಆರೋಪಗಳನ್ನು ರುಜುವಾತುಪಡಿಸಲು ವಿಫಲವಾಗಿದೆ ಎಂದು ಪರಿಗಣಿಸಿ, ಅನುಮಾನದ ಲಾಭವನ್ನು ಆರೋಪಿಗಳಿಗೆ ನೀಡಿ, ಅಂಶ-1 ರಿಂದ 4 ನ್ನು ನಕಾರಾತ್ಮಕವಾಗಿ ನ್ಯಾಯಾಲಯ ಉತ್ತರಿಸಿದೆ.

14. <u>ಅಂಶ-4:</u> ಮೇಲ್ಕಂಡಂತೆ ಚರ್ಚಿಸಿ, ಬಂದ ನಿರ್ಣಯದಂತೆ ಈ ಕೆಳಕಂಡಂತೆ ಆದೇಶವನ್ನು ಈ ನ್ಯಾಯಾಲಯವು ಮಾಡಿರುತ್ತದೆ.

<u>ಆದೇಶ</u>

ದಂಡ ಪ್ರಕ್ರಿಯಾ ಸಂಹಿತೆ ಕಲಂ.248(1) ರಡಿಯಲ್ಲಿ ನ್ಯಾಯಾಲಯವು ಪ್ರದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ 1 ರಿಂದ 3 ನೇ ಆರೋಪಿತರ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ. 323, 324, 504, 506 ಸಹವಾಚಕ 34 ರಡಿಯಲ್ಲಿ ಹೊರಿಸಲಾದ ಆರೋಪಗಳಿಂದ ಆರೋಪಿತರನ್ನು ನಿರ್ದೋಷಿಗಳು ಎಂದು ನಿರ್ಣಯಿಸಿ ಬಿಡುಗಡೆಗೆ ಆದೇಶಿಸಲಾಗಿರುತ್ತದೆ.

ಆರೋಪಿತರು ಮತ್ತು ಅವರ ಜಾಮೀನುದಾರರು ಬರೆದು ಕೊಟ್ಟಿರುವ ಜಾಮೀನಿನ ಮುಚ್ಚಳಿಕೆಗಳು ದಂಡ ಪ್ರಕ್ರಿಯಾ ಸಂಹಿತೆ ಕಲಂ. 437(ಎ)ರಡಿಯಲ್ಲಿ 6 ತಿಂಗಳವರೆಗೆ ಜಾರಿಯಲ್ಲಿರುತ್ತದೆ.

ಮಾಲುಪಟ್ಟಿ ಸಂಖ್ಯೆ 69/2024 ದಿನಾಂಕಃ 17.04.2024 ರಲ್ಲಿ ನಮೂದಿಸಿರುವ ಒಂದು ಹಿಡಿ ಗಾತ್ರ ದಪ್ಪದ ಮೂರು ಅಡಿ ಉದ್ದದ ನೀಲಗಿರಿ ದೊಣ್ಣೆ ಹಾಗೂ ಸುಮಾರು ಒಂದೂವರೆ ಹಿಡಿ ಗಾತ್ರ ದಪ್ಪದ ಒಂದು ಕಲ್ಲು ಯಾವುದೇ ಬೆಲೆ ಬಾಳದ ವಸ್ತುಗಳಾಗಿರುವುದರಿಂದ ಮೇಲ್ಮನವಿ ಅವಧಿ ಮುಗಿದ ನಂತರ ನಾಶಪಡಿಸತಕ್ಕದ್ದು.

(ಶ್ರೀಘ್ರಲಿಪಿಗಾರನಿಗೆ ಗಣಕೀಕರಣದ ಮೂಲಕ ನೇರವಾಗಿ ಉಖ್ತಲೇಖನ ನೀಢಿ ತಿದ್ದುಪಡಿ ಮಾಡಿ, ನಂತರ ತೆರೆದ ನ್ಯಾಯಾಲಯದಲ್ಲಿ ಇಂದು ದಿನಾಂಕ 02 ನೇ ಏಪ್ರಿಲ್-2026 ರಂದು ಘೋಷಿಸಲಾಯಿತು)

(ಶ್ರೀಮತಿ. ಸುಕನ್ಯಾ ಸಿ.ಎಸ್)<br>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು<br>ಜೆ.ಎಂ.ಎಫ್.ಸಿ, ಶಿಡ್ಲಘಟ್ಟ

## ಅನುಸೂಚಿ

1. ಅಭಿಯೋಜನೆ ಪರ ವಿಚಾರಣೆ ಮಾಡಲಾದ ಸಾಕ್ಷಿದಾರರ ವಿವರಃ

   ಫ್ರಾಸಾ-1 : ಸರಸ್ವತಿ

   ಫ್ರಾಸಾ-2 : ವೆಂಕಟರಾಯಪ್ಪ

2. ಅಭಿಯೋಜನೆ ಪರ ಗುರುತಿಸಲಾದ ದಾಖಲೆಗಳ ವಿವರಃ

   ನಿಪಿ-1 : ಅಸಾ.1 ರವರ ಪ್ರಥಮ ವರ್ತಮಾನ ಹೇಳಿಕೆ

   ನಿಪಿ-2 : ಅಸಾ.2 ರವರ ಹೇಳಿಕೆ

3. ಅಭಿಯೋಜನೆ ಪರ ಗುರುತಿಸಲಾದ ಮುದ್ದೆಮಾಲುಗಳ ವಿವರಃ

ಯಾವುದೂ ಇಲ್ಲ

4. ಆರೋಪಿ ಪರ ವಿಚಾರಣೆ ಮಾಡಲಾದ ಸಾಕ್ಷಿದಾರರ ವಿವರ:

ಯಾರೂ ಇಲ್ಲ

5. ಆರೋಪಿ ಪರ ಗುರುತಿಸಲಾದ ದಾಖಲೆಗಳ ವಿವರಃ

ಯಾವುದೂ ಇಲ್ಲ

(ಶ್ರೀಮತಿ. ಸುಕನ್ಯಾ ಸಿ.ಎಸ್)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ, ಶಿಡ್ಲಘಟ್ಟ.